**SRUJANI** ISSN: 2583-3510

**Indian Journal of Innovative Research and Development (SIJIRD)**

Volume-1 (02), May-June 2022, Pp. 95-98
Bi-Monthly, Peer-Reviewed, Open Access, Indexed Journal
editor@srujani.in
www.srujani.in

# ಸಾಮಾಜಿಕ ಸಮಾನತೆಯಲ್ಲಿ ಡಾ. ಬಿ. ಆರ್. ಅಂಬೇಡ್ಕರ್ ಪಾತ್ರ : ಒಂದು ಅಧ್ಯಯನ

**ಸ್ವಾಮಿ***

*ಸಂಶೋಧನಾರ್ಥಿ, ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ

***Abstract:***

ಸಾಮಾಜಿಕ ನ್ಯಾಯದ ಪರಿಕಲ್ಪನೆಯು ಸಾಮಾಜಿಕ ನಿಯಮಗಳು, ಸುವ್ಯವಸ್ಥೆ, ಕಾನೂನು ಮತ್ತು ನೈತಿಕತೆಯ ವಿಕಾಸದ ಪ್ರಕ್ರಿಯೆಯಿಂದ ಹೊರಹೊಮ್ಮಿತು. 'ಸಾಮಾಜಿಕ ನ್ಯಾಯ' ಎಂಬ ಪದವು ಎರಡು ಪದಗಳನ್ನು ಒಳಗೊಂಡಿದೆ; 'ಸಾಮಾಜಿಕ' ಎಂಬ ಪದವು ಸಮಾಜದಲ್ಲಿ ವಾಸಿಸುವ ಎಲ್ಲಾ ಮಾನವರಿಗೆ ಸಂಬಂಧಿಸಿದೆ, ಆದರೆ 'ನ್ಯಾಯ' ಎಂಬ ಪದವು ಸ್ವಾತಂತ್ರ್ಯ, ಸಮಾನತೆ ಮತ್ತು ಹಕ್ಕುಗಳಿಗೆ ಸಂಬಂಧಿಸಿದೆ. ಹೀಗಾಗಿ, ಸಾಮಾಜಿಕ ನ್ಯಾಯವು ಸ್ವಾತಂತ್ರ್ಯವನ್ನು ಖಾತ್ರಿಪಡಿಸುವುದು, ಸಮಾನತೆಯನ್ನು ಒದಗಿಸುವುದು ಮತ್ತು ಸಮಾಜದಲ್ಲಿ ಪ್ರತಿಯೊಬ್ಬ ಮನುಷ್ಯನಿಗೆ ವೈಯಕ್ತಿಕ ಹಕ್ಕುಗಳನ್ನು ಕಾಪಾಡಿಕೊಳ್ಳುವುದು. ಬೇರೆ ರೀತಿಯಲ್ಲಿ ಹೇಳುವುದಾದರೆ, ಸಮಾಜದ ಎಲ್ಲ ಸದಸ್ಯರ ಸಾಮರ್ಥ್ಯಗಳ ಅತ್ಯುನ್ನತ ಬೆಳವಣಿಗೆಯನ್ನು ಭದ್ರಪಡಿಸುವುದನ್ನು ಸಾಮಾಜಿಕ ನ್ಯಾಯ ಎಂದು ಕರೆಯಬಹುದಾಗಿದೆ. ಪ್ರಸ್ತುತ ಲೇಖನದಲ್ಲಿ ಸಾಮಾಜಿಕ ನ್ಯಾಯಕ್ಕೆ ಬಾಬಾ ಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್‌ರವರು ನೀಡಿರುವ ಕೊಡುಗೆಗಳನ್ನು ವಿವರಿಸಲಾಗಿದೆ.

***Key Words:*** ಅಂಬೇಡ್ಕರ್, ಅಸಮಾನತೆ, ಶೋಷಣೆ, ಸಾಮಾಜಿಕ ನ್ಯಾಯ, ಸಂವಿಧಾನ, ಹಕ್ಕುಗಳು.

**ಪೀಠಿಕೆ**

ಭಾರತೀಯ ಸಮಾಜದಲ್ಲಿ ಮಾನವ ಬದುಕಿನ ಎಲ್ಲಾ ಕ್ಷೇತ್ರಗಳಲ್ಲಿಯೂ ಉದ್ದೇಶಪೂರ್ವಕವಾಗಿ ವಂಚಿತ ವರ್ಗಕ್ಕೆ ಸೇರಿದ ಸಮುದಾಯಗಳನ್ನು ನಿರ್ಲಕ್ಷ್ಯಕ್ಕೆ ಒಳಗಾಗಿವೆ ಎಂದು ಸಾಮಾಜಿಕ ನ್ಯಾಯಪರ ಚಿಂತಕರು ಮತ್ತು ಹೋರಾಟಗಾರರು ಸಹಜವಾಗಿ ಪ್ರತಿಪಾದಿಸುತ್ತಾರೆ. ಶೋಷಿತ ವರ್ಗಗಳ ದೃಷ್ಟಿಕೋನ ಮಾನವತಾವಾದದ ಅವಿಭಾಜ್ಯ ಅಂಗವಾಗಿದೆ. ಹುಟ್ಟಿನಿಂದಲೇ ಯಾರೂ ಶ್ರೇಷ್ಠರಲ್ಲ ಮತ್ತು ಕನಿಷ್ಠರಲ್ಲ ಎಂಬುದನ್ನು ಮಾನವತಾವಾದ ಸ್ಪಷ್ಟವಾಗಿ ಸಮರ್ಥಿಸುತ್ತದೆ. ಶ್ರೇಣೀಕೃತ ವ್ಯವಸ್ಥೆಯನ್ನು ಮಾನವತಾವಾದ ಹಾಗೂ ಸಮಾಜವಾದಗಳು ತಿರಸ್ಕರಿಸುತ್ತವೆ. ಸಮಾಜದ ಬಲಾಢ್ಯರು–ದುರ್ಬಲರ ನಡುವೆ ಇರುವ ಅಸಮಾನತೆ ಪ್ರಕೃತಿ ಸಹಜವಲ್ಲ ಎಂದು ಮಾನವತಾವಾದ ತಿಳಿಸುತ್ತದೆ. ಅಸಮಾನತೆಯ ನೆಲೆಗಟ್ಟಿನ ಮೇಲೆ ರೂಪುಗೊಂಡ ಸಾಮಾಜಿಕ ವ್ಯವಸ್ಥೆ ದಲಿತರು, ಮಹಿಳೆಯರು ಮತ್ತು ದುರ್ಬಲ ವರ್ಗಗಳನ್ನು ಇತಿಹಾಸದುದ್ದಕ್ಕೂ ಕಡೆಗಣಿಸಿದೆ. ವಂಚಿತ ವರ್ಗಗಳ ಪರ ಹಕ್ಕೊತ್ತಾಯಗಳನ್ನು ಮೇಲ್ಪದರಿನ ನೆಲೆಯಲ್ಲಿ ಕಲ್ಪಿಸಿ ಸಂಘಟಿತ ಹೋರಾಟ ನಡೆಸಿದರೆ ಸಾಲದು. ಸಾಮಾಜಿಕ–ಆರ್ಥಿಕ ಪಾತಳದಲ್ಲಿ ಸಿಲುಕಿಕೊಂಡಿರುವ ಭಾರತೀಯ ವಂಚಿತ ವರ್ಗಗಳ ಬದುಕು ಮಾನವತಾವಾದ, ವೈಚಾರಿಕತೆ ಮತ್ತು ಸಮತಾವಾದದ ನೆಲೆಗಳಿಂದ ಶಕ್ತಿಯನ್ನು ಪಡೆದುಕೊಳ್ಳಬೇಕಾಗಿದೆ. ವಂಚಿತ ವರ್ಗಗಳ ಶಿಕ್ಷಣದಲ್ಲಿ ಅಂಬೇಡ್ಕರ್ ವಹಿಸಿದ ನಿರ್ಣಾಯಕ ಪಾತ್ರವನ್ನು ಕುರಿತ ಅಧ್ಯಯನ ಮತ್ತು ಪ್ರಕಟಣೆಗಳು ಆಧುನಿಕ ಸಮಾಜದಲ್ಲಿ ಪ್ರಸ್ತುತವಾಗಿವೆ.

ಸಾಮಾಜಿಕ ಸಮಾನತೆ ಮತ್ತು ಸಾಮಾಜಿಕ ನ್ಯಾಯವು ಬಹು ಆಯಾಮದ ಪರಿಕಲ್ಪನೆಯಾಗಿದ್ದು, ಕಾನೂನು, ತತ್ವಶಾಸ್ತ್ರ ಮತ್ತು ರಾಜಕೀಯ ವಿಜ್ಞಾನದ ವಿದ್ವಾಂಸರು ವಿಭಿನ್ನವಾಗಿ ವೀಕ್ಷಿಸಿದ್ದಾರೆ. ಸಾಮಾಜಿಕ ನ್ಯಾಯವು ಉಳ್ಳವರು ಮತ್ತು ಇಲ್ಲದವರ ನಡುವಿನ ಸಮತೋಲನ ಚಕ್ರವಾಗಿದೆ.

*Please cite this article as:* ಸ್ವಾಮಿ. (2022). ಸಾಮಾಜಿಕ ಸಮಾನತೆಯಲ್ಲಿ ಡಾ. ಬಿ. ಆರ್. ಅಂಬೇಡ್ಕರ್ ಪಾತ್ರ : ಒಂದು ಅಧ್ಯಯನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 1(2), 95–98.

ಸಾಮಾಜಿಕ ನ್ಯಾಯವು ದೇಶದ ಏಕತೆಯನ್ನು ಭದ್ರಪಡಿಸುವಲ್ಲಿ ದೊಡ್ಡ ಸಾಮಾಜಿಕ ಮೌಲ್ಯವಾಗಿದೆ. ಸಾಮಾನ್ಯವಾಗಿ, ಸಾಮಾಜಿಕ ನ್ಯಾಯವನ್ನು ದುರ್ಬಲರು, ವೃದ್ಧರು, ನಿರ್ಗತಿಕರು, ಬಡವರು, ಮಹಿಳೆಯರು, ಮಕ್ಕಳು ಮತ್ತು ಇತರ ಸೌಲಭ್ಯ ವಂಚಿತ ವ್ಯಕ್ತಿಗಳ ಹಕ್ಕು ಎಂದು ವ್ಯಾಖ್ಯಾನಿಸಬಹುದು. ಸಾಮಾಜಿಕ ನ್ಯಾಯ ಎಂಬುದು ಒಂದು ಪ್ರಕ್ರಿಯೆ, ಸಂಕೀರ್ಣ ಮತ್ತು ಅನೇಕ ಅಂಶಗಳ ನಡುವೆ ಸಮತೋಲನವನ್ನು ಬದಲಾಯಿಸುತ್ತದೆ. ಸಾಮಾಜಿಕ ನ್ಯಾಯವು ಮೂಲಭೂತವಾಗಿ ಕಾನೂನಿನ ನಿಯಮಕ್ಕೆ ಪುಷ್ಟಿ ನೀಡುವ ಪದವಾಗಿದೆ. ಇದು ಆರ್ಥಿಕ ನ್ಯಾಯವನ್ನು ಒಳಗೊಂಡಿರುತ್ತದೆ ಎಂಬ ಅರ್ಥದಲ್ಲಿ ವಿಶಾಲವಾದ ಅರ್ಥವನ್ನು ಹೊಂದಿದೆ. ಇದು ಎಲ್ಲಾ ರೀತಿಯ ಅಸಮಾನತೆಗಳನ್ನು ತೊಡೆದುಹಾಕಲು ಮತ್ತು ಸಾಮಾಜಿಕ ಮತ್ತು ಆರ್ಥಿಕ ವ್ಯವಹಾರಗಳಲ್ಲಿ ಎಲ್ಲಾ ನಾಗರಿಕರಿಗೆ ಸಮಾನ ಅವಕಾಶಗಳನ್ನು ಒದಗಿಸುವ ಗುರಿಯನ್ನು ಹೊಂದಿದೆ. ಹೀಗಾಗಿ ಸಾಮಾಜಿಕ ನ್ಯಾಯದ ಗುರಿ ಜಾತಿ, ಜನಾಂಗ, ಲಿಂಗ, ಅಧಿಕಾರ, ಸ್ಥಾನ, ಸಂಪತ್ತಿನ ಆಧಾರದ ಮೇಲೆ ಎಲ್ಲಾ ರೀತಿಯ ಅಸಮಾನತೆಗಳನ್ನು ತೊಡೆದುಹಾಕುವುದು ಮತ್ತು ಸಾಮಾಜಿಕ ನ್ಯಾಯದ ವಿತರಣೆಯನ್ನು ತರುವುದು ಸಾಮಾಜಿಕ ಹಕ್ಕುಗಳು ಮತ್ತು ಸಾಮಾಜಿಕ ನಿಯಂತ್ರಣಗಳ ನಡುವಿನ ಸಮತೋಲನವಾಗಿದೆ.

**ಸಾಮಾಜಿಕ ಸಮಾನತೆಯಲ್ಲಿ ಡಾ. ಬಿ. ಆರ್. ಅಂಬೇಡ್ಕರ್ ಪಾತ್ರ**

ಡಾ. ಭೀಮರಾವ್ ರಾಮ್‌ಜಿ ಅಂಬೇಡ್ಕರ್ ಭಾರತದ ಸುಪುತ್ರ. ಮಾನವತೆಯ ಹರಿಕಾರ ಮತ್ತು ಶೋಷಿತರ ಮಹಾನ್ ನಾಯಕ. ಅವರ ವಿಚಾರಧಾರೆಗಳು ಮತ್ತು ಹೋರಾಟ ಇಂದಿಗೂ ಕೂಡ ಭಾರತದ ಕೋಟ್ಯಾನುಕೋಟಿ ಶೋಷಿತರ ವಿಮೋಚನೆಗೆ ದಾರಿದೀಪ. ಬುದ್ಧ, ಬಸವಣ್ಣ, ಮಹಾತ್ಮ ಜ್ಯೋತಿ ಫುಲೆ ಮೊದಲಾದವರ ಬದುಕು ಚಿಂತನೆ ಮತ್ತು ಆದರ್ಶಗಳಿಂದ ಪ್ರಭಾವಿತರಾದ ಅಂಬೇಡ್ಕರ್ ಭಾರತದ ಪುರೋಹಿತಶಾಹಿ, ಬಂಡವಾಳಶಾಹಿ, ಮತ್ತಿತರ ಜನವಿರೋಧಿ ಶಕ್ತಿಗಳ ವಿರುದ್ಧ ಜೀವನಪರ್ಯಂತ ಸಮರವನ್ನೇ ಸಾರಿದ್ದರು. ಅಂಬೇಡ್ಕರ್ ತಾವು ನಂಬಿದ್ದ ಮೌಲ್ಯಗಳನ್ನು ಅನುಷ್ಠಾನಗೊಳಿಸುವ ವಿಷಯದಲ್ಲಿ ಎಂದಿಗೂ ರಾಜಿ ಮಾಡಿಕೊಂಡವರಲ್ಲ. ಅವರು ತಮ್ಮ ಜೀವನದಲ್ಲಿ ಸಿಹಿಗಿಂತ ಕಹಿಯನ್ನೇ ಉಂಡದ್ದು ಹೆಚ್ಚು. ಶ್ರೇಷ್ಠ ಸಮಾಜ ಸುಧಾರಕ, ಕ್ರಾಂತಿಕಾರಿ, ಮಾನವ ಹಕ್ಕುಗಳ ಹೋರಾಟಗಾರ, ರಾಜನೀತಿ ಪಂಡಿತ, ಅರ್ಥಶಾಸ್ತ್ರಜ್ಞ, ಶಿಕ್ಷಣ ಪ್ರಚಾರಕ, ಕಾನೂನು ಪಂಡಿತ, ಪತ್ರಿಕೋದ್ಯಮಿ, ಸಂವಿಧಾನ ಶಿಲ್ಪಿ, ಸಂಶೋಧಕ ಹೀಗೆ ನಾನಾ ಮುಖಗಳುಳ್ಳ ಅಪೂರ್ವ ವಿಮೋಚಕ ಡಾ.ಅಂಬೇಡ್ಕರ್.

ಅಂಬೇಡ್ಕರ್‌ರವರು ಬದುಕು, ಹೋರಾಟ ಮತ್ತು ವಿಚಾರಗಳು ಇಂದಿಗೂ ಕೂಡ ಭಾರತದ ಕೋಟ್ಯಾನುಕೋಟಿ ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು, ಮಹಿಳೆಯರು ಮತ್ತಿತರ ಶೋಷಿತ ಜನವರ್ಗಗಳಿಗೆ ಆದರ್ಶ ಪ್ರಾಯ. ಅವರು ವ್ಯವಸ್ಥೆಯೊಂದಿಗೆ ಎಂದಿಗೂ ರಾಜಿ ಮಾಡಿಕೊಳ್ಳದೇ ನಿರಂತರವಾಗಿ ಅನ್ಯಾಯದ ವಿರುದ್ಧ ಹೋರಾಡಿ 'ಸಾಮಾಜಿಕ ನ್ಯಾಯದ ಜ್ಯೋತಿ' ಎಂದು ಜಗದ್ವಿಖ್ಯಾತರಾದರು.

ವಿಶ್ವದೆಲ್ಲೆಡೆ ಇಂದು ಅಂಬೇಡ್ಕರ್‌ರವರ ವಿಚಾರಧಾರೆಗಳ ಬಗ್ಗೆ ಬಹಳಷ್ಟು ಸಂವಾದಗಳು ಮತ್ತು ಸಂಶೋಧನೆಗಳು ಜರುಗುತ್ತಿರುವುದು ಗಣನೀಯ ಸಂಗತಿಯಾಗಿದೆ. ಡಾ. ಬಿ. ಆರ್‌ಅಂಬೇಡ್ಕರ್‌ರವರು ತಮ್ಮ ಪ್ರಾರಂಭದ ವೃತ್ತಿ ಜೀವನವನ್ನು ಬಾಂಬೆಯಲ್ಲಿ ಶಿಕ್ಷಕರಾಗಿ ಮತ್ತು ಸರ್ಕಾರಿ ಕಾನೂನು ಕಾಲೇಜಿನ ಪ್ರಾಂಶುಪಾಲರಾಗಿ ಕಳೆದವರು. ರಾಷ್ಟ್ರದಲ್ಲಿ ತುಳಿತಕ್ಕೆ ಒಳಗಾದಂತಹ, ಶೋಷಿತ ವರ್ಗದ ಕಲ್ಯಾಣ ಮತ್ತು ಸೇವೆಗಾಗಿ ತಮ್ಮ ಬೋಧಕ ವೃತ್ತಿಯನ್ನು ತ್ಯಜಿಸುತ್ತಾರೆ. ಅವರ ಶೈಕ್ಷಣಿಕ ಕೊಡುಗೆಗಳು ಭವಿಷ್ಯ ಭಾರತಕ್ಕೆ ಪೂರ್ವಯೋಜಿತವಾಗಿದವು. ಶಿಕ್ಷಕ ಮತ್ತು ಪ್ರಾಂಶುಪಾಲರಾಗಿ ರಾಷ್ಟ್ರದ ಮಹಾನ್ ವಾಗ್ಮಿಯಾಗಿದ್ದ ಬಾಬಾಸಾಹೇಬ್ ಅಂಬೇಡ್ಕರರು ಬುದ್ಧನ ಮಹಾನ್ ಬೋಧನೆಗಳನ್ನು ಚಿಂತನೆಗಳ ಮೂಲಕ ಶೈಕ್ಷಣಿಕ ಘನತೆಗೆ ಬುನಾದಿಯನ್ನು ರೂಪಿಸಿದರು.

ಸತ್ಯ, ಅಹಿಂಸೆ, ಪ್ರೀತಿ, ಸಮಾನತೆ, ಹೋರಾಟ ಇವೇ ಮೊದಲಾದ ಪ್ರಜಾಸತ್ತಾತ್ಮಕ ಅಸ್ತ್ರಗಳನ್ನು ಬಳಸಿಕೊಂಡು ದೇಶದ ಜಾತೀಯತೆ, ಅಸ್ಪೃಶ್ಯತೆ, ಅಸಮಾನತೆ, ಅನ್ಯಾಯ, ದಬ್ಬಾಳಿಕೆ, ಶೋಷಣೆ ಮೊದಲಾದ ಪಿಡುಗುಗಳ ವಿರುದ್ಧ ಜೀವನ ಪರ್ಯಂತ ಹೋರಾಟ ನಡೆಸಿದ ಅಂಬೇಡ್ಕರ್ ನಿಜಕ್ಕೂ ಇತಿಹಾಸ ಪುರುಷರು. ಅವರು ಯಾವುದೇ ಒಂದು ಜಾತಿಯ ಅಥವಾ ಧರ್ಮದ ನಾಯಕರಲ್ಲ. ಮಾನವೀಯತೆಯೊಂದೇ ತನ್ನ ಜಾತಿ ಮತ್ತು ಜೀವನ ಧರ್ಮ ಎಂದು ತಮ್ಮ ಧೋರಣೆ, ಹೋರಾಟ ಮತ್ತು ಸಾಧನೆಗಳ ಮೂಲಕ ಸಾಬೀತುಪಡಿಸಿದ ಮಹಾನ್ ಮಾನವತಾವಾದಿ ಅಂಬೇಡ್ಕರ್ ಎಂದೆಂದೂ ತುಳಿತಕ್ಕೊಳಗಾದ ಜನವರ್ಗಗಳಿಗೆ ಅಪ್ರತಿಮ ದಾರ್ಶನಿಕ. ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು, ರೈತರು, ಕಾರ್ಮಿಕರು, ಮಹಿಳೆಯರು ಹೀಗೆ ಎಲ್ಲಾ ಶೋಷಿತ ವರ್ಗಗಳ ಶಿಕ್ಷಣ, ಸಂಘಟನೆ, ಹೋರಾಟ, ವಿಮೋಚನೆ ಮತ್ತು ಸಬಲೀಕರಣಗಳಿಗಾಗಿ ಸತತವಾಗಿ ದುಡಿದು ಸಂವಿಧಾನಾತ್ಮಕ ಅವಕಾಶಗಳು ಮತ್ತು ರಕ್ಷಣೆಗಳನ್ನು ಒದಗಿಸಿದ ಅಂಬೇಡ್ಕರ್ ಸಾವಿಲ್ಲದ ಸರದಾರರಾಗಿದ್ದಾರೆ. ಇಂದಿಗೂ ಸಹ ಅಂಬೇಡ್ಕರ್ ವಿಶ್ವದಾದ್ಯಂತ ಅಗಾಧ ಪ್ರಮಾಣದಲ್ಲಿ ಜನಮನ್ನಣೆ, ಅಭಿಮಾನಿಗಳು ಮತ್ತು

ಅನುಯಾಯಿಗಳನ್ನು ಗಳಿಸುತ್ತಿದ್ದಾರೆ. ಅಂಬೇಡ್ಕರ್‌ರವರ ಬದುಕು, ಹೋರಾಟ ಮತ್ತು ವಿಚಾರಗಳು ಜಗತ್ತಿನ ಶೋಷಿತ ಜನ ವರ್ಗಗಳ ಮೇಲೆ ಹೆಚ್ಚು ಪ್ರಭಾವ ಬೀರುತ್ತಿವೆ. ಶೋಷಣಾ ರಹಿತ ನವ ಸಮಾಜ ನಿರ್ಮಾಣ ಕಾರ್ಯದಲ್ಲಿ ತೊಡಗುವ ಎಲ್ಲರಿಗೂ ಅವರು ಅತ್ಯಂತ ಪ್ರಸ್ತುತ, ನಿತ್ಯ ಚೇತನ ಹಾಗೂ ಮಾರ್ಗದರ್ಶನ.

ಅಂಬೇಡ್ಕರ್ ಹುಟ್ಟಿನಿಂದ ದಲಿತರಾಗಿದ್ದರೂ ಅವರು ಕೇವಲ ದಲಿತರ ನಾಯಕರಷ್ಟೇ ಅಲ್ಲ. ಅಂಬೇಡ್ಕರ್ ಸಮಸ್ತ ಭಾರತೀಯರು ಮತ್ತು ವಂಚಿತ ವರ್ಗಗಳ ಸಬಲೀಕರಣಕ್ಕಾಗಿ ಜೀವನಪರ್ಯಂತ ಹೋರಾಡಿ ಮತ್ತು ಸಂವಿಧಾನಾತ್ಮಕ ರಕ್ಷಣೆಗಳು ಮತ್ತು ಅವಕಾಶಗಳನ್ನು ಕಲ್ಪಿಸಿದರು. ಭಾರತದಲ್ಲಿ ರೈತರನ್ನು ಸಂಘಟಿಸಿ ಭೂಮಿಯ ರಾಷ್ಟ್ರೀಕರಣ ಅಥವಾ ಪುನರ್ ಹಂಚಿಕೆಯಾಗಬೇಕೆಂದು ಬಲವಾಗಿ ವಾದಿಸಿದರು. ಅವರೇ ನಿಜಕ್ಕೂ ಭೂಸುಧಾರಣಾ ಮಸೂದೆಯ ಕಾರಣಕರ್ತರು. ಭಾರತದಲ್ಲಿ ಕಾರ್ಮಿಕರ ಪಕ್ಷವನ್ನು ಕಟ್ಟಿ, ಕಾರ್ಮಿಕರು ದೇಶದ ಪ್ರಭುಗಳಾಗಬೇಕೆಂದು ಅಂಬೇಡ್ಕರ್ ಕನಸು ಕಂಡರು. ನಮ್ಮ ಸಂವಿಧಾನದಲ್ಲಿ ಹಲವಾರು ಕಾರ್ಮಿಕ ಕಾನೂನುಗಳು ಮತ್ತು ರಕ್ಷಣಾತ್ಮಕ ವಿಧಿ ವಿಧಾನಗಳನ್ನು ಅವರು ಅಳವಡಿಸಿದ್ದಾರೆ. ಹಿಂದುಳಿದ ಜನವರ್ಗಗಳಿಗೂ ಮೀಸಲಾತಿ ಸೌಲಭ್ಯ ದೊರಕಲು ಅಂಬೇಡ್ಕರ್ ಮೂಲಭೂತವಾಗಿ ಕಾರಣಕರ್ತರು. ಮಂಡಲ್ ಸಮಿತಿ ನೀಡಿರುವ ಹಲವಾರು ಶಿಫಾರಸ್ಸುಗಳಿಗೆ ಅಂಬೇಡ್ಕರ್ ದೃಷ್ಟಿಕೋನವೇ ಮೂಲಾಧಾರ. ಆದಿವಾಸಿಗಳಿಗೆ ಸಂವಿಧಾನದಲ್ಲಿ ಹಲವಾರು ಅಭಿವೃದ್ಧಿ ಅವಕಾಶಗಳನ್ನು ಕಲ್ಪಿಸಿಕೊಟ್ಟ ಗಿರಿಜನ ಕಲ್ಯಾಣದ ಪ್ರಬಲ ರೂವಾರಿಯಾಗಿ ಮೂಡಿಬಂದವರು ಅಂಬೇಡ್ಕರ್. ಧಾರ್ಮಿಕ ಅಲ್ಪಸಂಖ್ಯಾತರು ಮೂಲತಃ ಭಾರತೀಯರು ಮತ್ತು ಅವರನ್ನು ಸ್ವತಂತ್ರ ಭಾರತ ಸರ್ಕಾರ ಯಾವುದೇ ಕಾರಣಕ್ಕೂ ಕಡೆಗಣಿಸಬಾರದೆಂದು ಅಂಬೇಡ್ಕರ್ ಪ್ರತಿಪಾದಿಸಿದರು. ಅಲ್ಪಸಂಖ್ಯಾತರ ರಕ್ಷಣೆ ಮತ್ತು ಕಲ್ಯಾಣಕ್ಕಾಗಿ ಅವರು ಬಹಳಷ್ಟು ಅವಕಾಶಗಳನ್ನು ಸಂವಿಧಾನದಲ್ಲಿ ಕಲ್ಪಿಸಿಕೊಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ ಅಂಬೇಡ್ಕರ್ ಅವರು ಈ ದೇಶಕಂಡ ಬಹುಜನರ ಮಹಾನ್ ನಾಯಕ ಮತ್ತು ವಂಚಿತ ವರ್ಗಗಳ ಅಭಿವೃದ್ಧಿಯ ರೂವಾರಿ.

ಭಾರತೀಯ ಸಂವಿಧಾನದ 14ನೇ ವಿಧಿ ಹೀಗೆ ವಿಶ್ಲೇಷಿಸುತ್ತದೆ. 'ಭಾರತ ರಾಜ್ಯ ಕ್ಷೇತ್ರದಲ್ಲಿ ಯಾವುದೇ ವ್ಯಕ್ತಿಗೆ ಕಾನೂನಿನ ಮುಂದೆ ಸಮಾನತೆಯನ್ನು ಅಥವಾ ಕಾನೂನುಗಳಿಂದ ಸಮಾನ ಸಂರಕ್ಷಣೆಯನ್ನು ರಾಜ್ಯವು ನಿರಾಕರಿಸತಕ್ಕದ್ದು, ಎಲ್ಲರಿಗೂ 'ಕಾನೂನಿನ ದೃಷ್ಟಿಯಲ್ಲಿ ಸಮಾನತೆ ಅಥವಾ ಕಾನೂನಿನ ಸಮಾನ ರಕ್ಷಣೆ'ಯನ್ನು ಖಚಿತಪಡಿಸುತ್ತದೆ. ಅಂದರೆ ಯಾರೂ ಕಾನೂನು ಮೀರಿ ನಡೆಯುವಂತಿಲ್ಲ. ಕಾನೂನು ಎಲ್ಲರನ್ನೂ ಸಮಾನ ರೀತಿಯಲ್ಲಿ ನೋಡುತ್ತದೆ. ಇದು ಯಾರನ್ನೂ ಅನಾನುಕೂಲ ಪರಿಸ್ಥಿತಿಯಲ್ಲಿಡುವುದಿಲ್ಲ. ಅಂದರೆ ಎಲ್ಲ ನಾಗರಿಕರನ್ನು ಸಮಾನ ರೀತಿಯಲ್ಲಿ ಇದು ಕಾಣುತ್ತದೆ. ಸಮಾನತೆಯೆಂದರೆ ರಾಜ್ಯವು ಧರ್ಮ, ಜಾತಿ, ಲಿಂಗ ಅಥವಾ ಜನ್ಮಸ್ಥಾನದ ಆಧಾರದ ಮೇಲೆ ತಾರತಮ್ಯ ಮಾಡುವಂತಿಲ್ಲ. ಸಮಾನತೆಯು ತಾರತಮ್ಯದ ವಿರುದ್ಧದ ಹಕ್ಕಾಗಿದೆ. ರಾಜ್ಯವು ಕಾನೂನಿನ ಮುಂದೆ ಸಮಾನತೆಯನ್ನು ಅಥವಾ ಕಾನೂನುಗಳಿಂದ ಸಮಾನ ಸಂರಕ್ಷಣೆಗಳನ್ನು ಮಹಿಳೆಯರನ್ನೂ ಒಳಗೊಂಡಂತೆ ಯಾವುದೇ ವ್ಯಕ್ತಿಗೆ ನಿರಾಕರಿಸುವಂತಿಲ್ಲ. ಮಹಿಳೆಯರ ಸಬಲೀಕರಣದ ನಿಟ್ಟಿನಲ್ಲಿ ಸಮಾನತೆಯ ಹಕ್ಕು ವಿಶೇಷ ಆಯಾಮವನ್ನು ಪಡೆದುಕೊಂಡಿದೆ.

ಭಾರತೀಯ ಸಂವಿಧಾನದ 15ನೇ ವಿಧಿ ಹೇಳುವುದೇನೆಂದರೆ ಸರ್ಕಾರವು ಭಾರತದ ಯಾವುದೇ ಪ್ರಜೆಯನ್ನು ಮತ, ಜಾತಿ, ಕುಲ, ಲಿಂಗ, ಹುಟ್ಟಿನ ಆಧಾರದ ಮೇಲೆ ತಾರತಮ್ಯಕ್ಕೆ ಗುರಿಪಡಿಸುವಂತಿಲ್ಲ . ಈ ವಿಧಿಯ ಪ್ರಕಾರ ಸರ್ಕಾರವು ಮಹಿಳೆಯರು ಮತ್ತು ವಂಚಿತ ವರ್ಗಗಳ ಕಲ್ಯಾಣಕ್ಕೆ ಪೂರಕವಾದ ವಿಶೇಷ ನೀತಿಗಳು ಮತ್ತು ಕಾರ್ಯಕ್ರಮಗಳನ್ನು ರೂಪಿಸಬಹುದಾಗಿದೆ. ಸಾರ್ವಜನಿಕ ಕ್ಷೇತ್ರದ ವ್ಯಾಪ್ತಿಗೊಳಪಡುವ ಸಂಸ್ಥೆಗಳಲ್ಲಿ ಭಾರತೀಯರಿಗೆ ಸಮಾನ ಉದ್ಯೋಗವಕಾಶಗಳು ಮತ್ತು ರಕ್ಷಣೆಗಳು ಲಭಿಸುತ್ತವೆ.

ಭಾರತೀಯ ಸಂವಿಧಾನದ 16ನೇ ವಿಧಿ ಹೇಳುವುದೇನೆಂದರೆ ಸಾರ್ವಜನಿಕ ಹುದ್ದೆಗಳಿಗೆ ಸಂಬಂಧಿಸಿದಂತೆ ನಿಯೋಜನೆ ಅಥವಾ ನೇಮಕಾತಿಯ ವಿಷಯದಲ್ಲಿ ಸಮಾನ ಅವಕಾಶವನ್ನು ಎಲ್ಲಾ ನಾಗರೀಕರಿಗೂ ಕೊಡಬೇಕು. ಉದ್ಯೋಗದ ಅವಕಾಶ ಸ್ತ್ರೀ–ಪುರುಷರು ಮತ್ತು ಪ್ರಬಲ–ದುರ್ಬಲ ವರ್ಗಗಳಿಗೆ ಸಮಾನವಾಗಿ ಲಭಿಸಬೇಕು ಮತ್ತು ಸಮಾನ ದುಡಿಮೆಗೆ ಸಮಾನ ವೇತನವನ್ನು ನೀಡಬೇಕೆಂದು ತಿಳಿಸುತ್ತದೆ. ಭಾರತೀಯ ನಾಗರೀಕರಿಗೆ ಉದ್ಯೋಗ ನೀಡಿಕೆ ವಿಚಾರದಲ್ಲಿ ಧರ್ಮ, ವರ್ಣ, ಜಾತಿ ಅಥವಾ ಲಿಂಗಗಳ ಆಧಾರದ ಮೇಲೆ ತಾರತಮ್ಯ ಎಸಗಬಾರದೆಂದು ಸ್ಪಷ್ಟವಾಗಿ ತಿಳಿಸುತ್ತದೆ.

ಭಾರತೀಯ ಸಂವಿಧಾನದ 14, 15 ಮತ್ತು 16ನೇ ವಿಧಿಗಳು ಮೂಲಭೂತ ಹಕ್ಕುಗಳಾಗಿದ್ದು ಇವುಗಳನ್ನು ಸಂವಿಧಾನದ ಭಾಗ 3 ರಲ್ಲಿ ಅರ್ಥಪೂರ್ಣವಾಗಿ ಅಳವಡಿಸಿ ಚರ್ಚಿಸಲಾಗಿದೆ. ಮೂಲಭೂತ ಹಕ್ಕುಗಳು ಸಂವಿಧಾನದ ಭಾಗವಾಗಿರುವುದರಿಂದ ಇವುಗಳನ್ನು ಸಂವಿಧಾನಬದ್ಧವಾದ ಹಕ್ಕುಗಳು' ಎಂದು ಕರೆಯಲಾಗುತ್ತದೆ. ಭಾರತೀಯ ಸಂವಿಧಾನ ಪ್ರಜೆಗಳಿಗೆ ದಯಪಾಲಿಸಿರುವ ಮೂಲಭೂತ

ಹಕ್ಕುಗಳ ಭಾಗ ಪಂಡಿತ್ ಜವಹರ್‌ಲಾಲ್ ನೆಹರೂ ಪ್ರಕಾರ ಸಂವಿಧಾನದ ವಿವೇಚನಾ ಶಕ್ತಿಯಾಗಿರುತ್ತದೆ'. ಮೂಲಭೂತ ಹಕ್ಕುಗಳ ಉಲ್ಲಂಘನೆಯಾದಾಗ ಸಂಬಂಧಪಟ್ಟ ಪ್ರಜೆಗಳು ಆಯಾ ರಾಜ್ಯದ ಉಚ್ಚನ್ಯಾಯಾಲಯದ ಅಥವಾ ದೇಶದ ಸರ್ವೋಚ್ಚ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಬಹುದು. ಸರ್ವೋಚ್ಚ ನ್ಯಾಯಾಲಯದ ಕಾರ್ಯವ್ಯಾಪ್ತಿ ಇಡೀ ದೇಶದಾದ್ಯಂತ ಇದೆ.

ಭಾರತೀಯ ಸಂವಿಧಾನದ 21ನೇ ವಿಧಿ ಪ್ರತಿಯೊಬ್ಬ ಪ್ರಜೆಗಳಿಗೂ ಬದುಕುವ ಹಕ್ಕು ಅಥವಾ ವೈಯಕ್ತಿಕ ಸ್ವಾತಂತ್ರ್ಯವಾದ ಬೇರ್ಪಡಿಸಲಾಗದ ಮಾನವ ಅಧಿಕಾರವನ್ನು ನೀಡುತ್ತದೆ. ಕಾನೂನುಬದ್ಧವಲ್ಲದ ರೀತಿಯಲ್ಲಿ ವ್ಯಕ್ತಿಯನ್ನು ಬಂಧಿಸಿದರೆ ಅವನು ಇದರ ವಿರುದ್ಧ ನ್ಯಾಯಾಲಯಕ್ಕೆ ಹೋಗಬಹುದು. ಮಹಿಳೆಯರು ಮತ್ತು ವಂಚಿತ ವರ್ಗಗಳು ಶೋಷಣೆಗೆ ಗುರಿಯಾದಾಗ ಅವರಿಗೆ ವಿಶೇಷ ಪುನರ್ವಸತಿ ಸೌಲಭ್ಯ ಕಲ್ಪಿಸಬೇಕು ಮತ್ತು ದುಡಿಯುವ ಸ್ಥಳಗಳಲ್ಲಿ ಲೈಂಗಿಕ ಕಿರುಕುಳವನ್ನು ಸಂಬಂಧಪಟ್ಟ ಸಂಸ್ಥೆಗಳು ತಡೆಯಬೇಕು.

ಭಾರತೀಯ ಸಂವಿಧಾನದ 46ನೇ ವಿಧಿ ರಾಜ್ಯದ ದುರ್ಬಲವರ್ಗಗಳ, ವಿಶೇಷವಾಗಿ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ ಜನತೆಯ ಶೈಕ್ಷಣಿಕ ಮತ್ತು ಆರ್ಥಿಕ ಹಿತಾಸಕ್ತಿಗಳನ್ನು ಸರ್ಕಾರ ವಿಶೇಷ ಜಾಗರೂಕತೆಯಿಂದ ವೃದ್ಧಿಗೊಳಿಸತಕ್ಕದ್ದು ಮತ್ತು ಅವರನ್ನು ಸಾಮಾಜಿಕ ಅನ್ಯಾಯ ಮತ್ತು ಶೋಷಣೆಗಳಿಂದ ಸಂರಕ್ಷಿಸಬೇಕೆಂದು ಸ್ಪಷ್ಟವಾಗಿ ತಿಳಿಸುತ್ತದೆ. ಭಾರತೀಯ ಸಂವಿಧಾನದ 47ನೇ ವಿಧಿ ಮಹಿಳೆಯರನ್ನೂ ಒಳಗೊಂಡಂತೆ ಸಮಸ್ತ ಭಾರತೀಯರ ಆರೋಗ್ಯ, ಪೌಷ್ಟಿಕತೆ ಮತ್ತು ಜೀವನ ಮಟ್ಟವನ್ನು ಹೆಚ್ಚಿಸುವುದು ಸರ್ಕಾರದ ಜವಾಬ್ದಾರಿಯೆಂದು ಸ್ಪಷ್ಟವಾಗಿ ತಿಳಿಸುತ್ತದೆ.

ಭಾರತೀಯ ಸಂವಿಧಾನ 51(ಅ) ವಿಧಿ ಭಾರತೀಯ ಪ್ರಜೆಗಳು ಧರ್ಮ, ಭಾಷೆ, ಪ್ರದೇಶ ಅಥವಾ ಲಿಂಗಬೇಧಗಳಿಲ ್ಲದೆ ಸಾಮರಸ್ಯ ಮತ್ತು ಭ್ರಾತೃತ್ವಗಳನ್ನು ಕಾಪಾಡಿಕೊಂಡು ಹೋಗಬೇಕೆಂದು ನಿರ್ದೇಶಿಸಿದೆ.

ಭಾರತೀಯ ಸಂವಿಧಾನದ 325ನೇ ವಿಧಿ ಸಮಸ್ತ ಭಾರತೀಯರಿಗೆ ಧರ್ಮ, ಮೂಲವಂಶ, ಜಾತಿ ಅಥವಾ ಲಿಂಗದ ಆಧಾರದ ಮೇಲೆ ಮತದಾರರ ಪಟ್ಟಿಯ ್ಲಿ ಸೇರುವ ಅರ್ಹತೆಯನ್ನು ಒದಗಿಸುತ್ತದೆ. ಭಾರತೀಯ ಸಂವಿಧಾನದ 326ನೇ ವಿಧಿ 18 ವರ್ಷ ತುಂಬಿದ ಎಲ್ಲಾ ಭಾರತೀಯ ಪ್ರಜೆಗಳಿಗೆ ಮತದಾನ ಮಾಡುವ ಮೂಲಭೂತ ಹಕ್ಕನ್ನು ದಯಪಾಲಿಸಿದೆ. ಆದರೆ ಭಾರತೀಯ ಪ್ರಜೆಗಳಲ್ಲದವರು ಮಾನಸಿಕ ಅಸ್ವಸ್ಥರು ಮತ್ತು ಅಪರಾಧಗಳಲ್ಲಿ ತೊಡಗಿರುವವರು ಇಂತಹ ಮತದಾನದ ಹಕ್ಕನ್ನು ಹೊಂದಬಾರದೆಂದು ಅನುಚ್ಛೇದ ಸ್ಪಷ್ಟವಾಗಿ ತಿಳಿಸುತ್ತದೆ. ಭಾರತೀಯ ಸಂವಿಧಾನವು ಮಹಿಳೆಯರು ಮತ್ತು ವಂಚಿತ ವರ್ಗಗಳ ರಕ್ಷಣೆ ಮತ್ತು ಸಬಲೀಕರಣಗಳಿಗೆ ಸಂಬಂಧಿಸಿದಂತೆ ಕಾಲದಿಂದ ಕಾಲಕ್ಕೆ ಹಲವಾರು ಕಾನೂನುಗಳನ್ನು ರಚಿಸಿದೆಯಲ್ಲದೆ ರಚಿಸುವ ಮತ್ತು ಪರಿಷ್ಕರಿಸುವ ಜವಾಬ್ದಾರಿಯನ್ನು ಶಾಸಕಾಂಗಕ್ಕೆ ನೀಡಿದೆ.

**ಉಪಸಂಹಾರ**

ಭಾರತ ದೇಶವು ಸಾಮಾಜಿಕವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ, ಜನಾಂಗೀಯವಾಗಿ, ಧಾರ್ಮಿಕವಾಗಿ ವೈವಿಧ್ಯತೆಯನ್ನು ಹೊಂದಿರುವಂತಹ ರಾಷ್ಟ್ರವಾಗಿದೆ. ಸಾಂಪ್ರದಾಯಿಕ ಜಾತಿ ವ್ಯವಸ್ಥೆಯಡಿಯಲ್ಲಿ ಭಾರತದಲ್ಲಿ ಸಾವಿರಾರು ಜಾತಿ–ಉಪಜಾತಿಗಳು ಕಂಡುಬಂದಿದ್ದು, ಜಾತಿ–ಜಾತಿಗಳ ನಡುವೆ ಅಸಮಾನತೆಯ ಅಂತರ ಕಡಿಮೆ ಮಾಡಿ ಸಮಾನತೆ ಸಾಧಿಸುವ ನಿಟ್ಟಿನಲ್ಲಿ ಅಂಬೇಡ್ಕರ್ ಪಾತ್ರ ಮಹತ್ವದ್ದಾಗಿದೆ.

**ಪರಾಮರ್ಶನ ಗ್ರಂಥಗಳು**


- ಅಂಬೇಡ್ಕರ್, ಬಿ.ಆರ್. (1920) ಸಂಪಾದಕೀಯ, ಮೂಕನಾಯಕ, ಅಕ್ಟೋಬರ್ 9.
- ಅಂಬೇಡ್ಕರ್, ಬಿ.ಆರ್. (1927) ಸಂಪಾದಕೀಯ, ಬಹಿಷ್ಕೃತ ಭಾರತ, ದಿನಾಂಕ ಜೂನ್, 29.
- ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು, ಸಂಪುಟ 1, ಶಿಕ್ಷಣ ಇಲಾಖೆ, ಮಹಾರಾಷ್ಟ್ರ ರಾಜ್ಯ ಸರ್ಕಾರ, ಮುಂಬೈ.
- ಬಾಟ್ಲಿವಾಲಾ, ಶ್ರೀಲತಾ (1994) ದ ಮೀನಿಂಗ್ ಆಫ್ ವಿಮೆನ್ಸ್ ಎಂಪವರ್‌ಮೆಂಟ್: ನ್ಯೂ ಕಾನ್ಸೆಪ್ಟ್ ಫ್ರಮ್ ಆಕ್ಷನ್, ಗೀತಾ ಸೇನ್, ಆಡ್ರಿಯ ್ಗೆನ್ನ ಜರ್ಮೈನ್ ಮತ್ತು ಲಿಂಕನ್ ಚೆನ್ (ಸಂ), ಪಾಪ್ಯುಲೇಶನ್ ಪಾಲಿಸಿಸ್ ರಿ ಕನ್ಸಿಡರ್ಡ್:ಹೆಲ್ತ್, ಎಂಪವರ್‌ಮೆಂಟ್ ಅಂಡ್ ರೈಟ್ಸ್, ಹಾರ್ವರ್ಡ್ ಸ್ಕೂಲ್ ಆಫ್ ಪಬ್ಲಿಕ್ ಹೆಲ್ತ್, ಬೋಸ್ಟನ್, ಯು.ಎಸ್.ಎ.
- ದಾಸ್, ಭಗವಾನ್ (1987) ರೆಲವೆನ್ಸ್ ಆಫ್ ಅಂಬೇಡ್ಕರ್, ಪ್ರಕಟಿತ ಭಾಷಣ, ಕರ್ನಾಟಕ ರಾಜ್ಯ ಸರ್ಕಾರ, ಗೌರ್ನಮೆಂಟ್ ಪ್ರೆಸ್, ಬೆಂಗಳೂರು.